**ದಿ: 21-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಪ್ರತಿವಾದಿ 3 ರಿಂದ 5 ಪರವಾಗಿ ಶ್ರೀ ವಿ ಡಿ ಸಿ ವಕೀಲರಿಂದ:**

1. 2020ನೇ ಇಸ್ವಿಯ ಪೂರ್ವದಲ್ಲಿ ನಾನು ನನ್ನ ತಾಯಿ ಪ್ರತಿವಾದಿ ನಂಬರ್ -6 ರವರ ಜೊತೆಯಲ್ಲಿ ಗಾಣಧಾಳನಲ್ಲಿ ವಾಸ ಮಾಡುತ್ತಿದ್ದೇನೆ. ನನ್ನ ತಂದೆಗೆ ನಾವು ಇಬ್ಬರು ಮಕ್ಕಳಿದ್ದೇವೆ ಅವರ ಹೆಸರು ಜಗದೀಶ ಮತ್ತು ಪ್ರತಿವಾದಿ ನಂಬರ್ -7 ಶಶಿರೇಖಾ ಅಂತಾ ಇರುತ್ತಾರೆ. ದಾವಾ ಸಲ್ಲಿಸುವ ಕಾಲಕ್ಕೆ ನಿಮ್ಮ ತಂದೆ ತಾಯಿ ಇವರನ್ನು ಯಾವ ಕಾರಣಕ್ಕೇ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿಯು ಅವರು ಬೇಡ ಎಂದು ಹೇಳಿರುತ್ತಾರೆ. ನನ್ನ ತಾಯಿ ಪಾರ್ವತಮ್ಮ ನನ್ನ ತಂದೆಯ ಸ್ವಂತ ಅಕ್ಕನ ಮಗಳಾಗಿರುತ್ತಾಳೆಂದರೆ ಸರಿ. ಮದುವೆಯಾದ ಮೇಲೆ ನಿಮ್ಮ ತಾಯಿ ಪಾರ್ವತೆಮ್ಮ ನಿಮ್ಮ ತಂದೆ ಜೊತೆಯಲ್ಲಿ ಗಾಣಾಧಾಲ ಗ್ರಾಮದಲ್ಲಿ ಸಂಸಾರ ಮಾಡಿರುವುದಿಲ್ಲ ಅವರು ಅವರ ತಾಯಿ ತವರು ಮನೆ ಗಲಗ ಗ್ರಾಮದಲ್ಲಿ ವಾಸ ಮಾಡಿಕೊಂಡಿದ್ದರು ಎಂದರೆ ಸರಿ. ನಾನು ಚಿಕ್ಕವನಾಗಿರುವುದರಿಂದ ನನ್ನ ತಂದೆ ನನ್ನ ತಾಯಿಯನ್ನು ಕರೆದುಕೊಂಡು ಹೋಗಲು ಊರಿಗೆ ಬರುತ್ತಿರುವುದು ನನಗೆ ಗೊತ್ತಿರುವುದಿಲ್ಲ. ನಿಮ್ಮ ತಾಯಿ ನಿಮ್ಮ ತಂದೆಯ ಜೊತೆಗೆ ಸಂಸಾರ ಮಾಡಲು ಒಪ್ಪದೆ ಇರುವುದರಿಂದ, ಮೌಖಿಕವಾಗಿ ನೀನು ಸಾರ್ವಜನಿಕವಾಗಿ ಮದುವೆ ಮಾಡಿಕೊ ಎಂದು ಹೇಳಿದ್ದರಿಂದ ಅನಿವಾರ್ಯವಾಗಿ ಪ್ರತಿವಾದಿ ನಂಬರ್ 5 ಶಾರದಾದೇವಿಯವರನ್ನು ಮದುವೆ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಿಮ್ಮ ತಂದೆ 5ನೇ ಪ್ರತಿವಾದಿಯನ್ನು ಮದುವೆ ಮಾಡಿಕೊಂಡಿರುವ ವಿಷಯ ನಿಮಗೆ ಗೊತ್ತಿದೆ ಮತ್ತು ನಿಮ್ಮ ತಾಯಿ ತಕರಾರು ಮಾಡಿಲ್ಲ ಎಂದರೆ ಸರಿಯಲ್ಲ. ಭಾಗ ಕೊಡಬೇಕಾಗುತ್ತದೆ ಎಂಬ ಕಾರಣಕ್ಕಾಗಿ 5ನೇ ಪ್ರತಿವಾದಿ ಏನೂ ಸಂಬಂಧ ಇಲ್ಲ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 1ನೇ ಪ್ರತಿವಾದಿ ನಿಮ್ಮ ತಂದೆ ಪ್ರತಿವಾದಿ ನಂಬರ್ 3 ರಿಂದ 5 ರವರ ಜೊತೆಗೆ ಗಾಣಧಾಳ ಗ್ರಾಮದಲ್ಲಿ ವಾಸ ಮಾಡಿಕೊಂಡಿದ್ದರು ನೀವು ಗಲಗ ಗ್ರಾಮದಲ್ಲಿ ವಾಸ ಮಾಡುತ್ತಿದ್ದೀರಿ ಎಂದರೆ ಸರಿ. ನಿಮ್ಮ ತಂದೆ ದಾವಾ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರು ಎಂದರೆ

ಸಾಕ್ಷಿಯು ಹೌದು ಅವರು ಬೇರೆಯವರಿಗೆ ಲೀಜ್ ಕೊಟ್ಟ ಲೀಜ್ ಹಣವನ್ನು ಪಡೆಯುತ್ತಿದ್ದರು ಎನ್ನುತ್ತಾರೆ. 2020 ರಲ್ಲಿ ಕೋರೋನ್ ಸಾಂಕ್ರಾಮಿಕ ರೋಗ ಬಂದ ಮೇಲೆ 1ನೇ ಪ್ರತಿವಾದಿ ದೇವದುರ್ಗಕ್ಕೆ ಬಂದು ವಾಸ ಮಾಡಿದ್ದಾರೆ ಎಂದರೆ ಸುಳ್ಳು. 2020 ರ ನಂತರ ನೀವು ಗಾಣಧಾಳ ಗ್ರಾಮದಲ್ಲಿರುವ ಮನೆಯಲ್ಲಿ ಸೇರಿಕೊಂಡಿದ್ದೀರಿ ಎಂದರೆ ಸಾಕ್ಷಿಯು 2013-14ನೆ ವರ್ಷದಿಂದ ಮನೆಯಲ್ಲಿದ್ದೇವೆ ಎಂದು ಹೇಳುತ್ತಾರೆ. 2013-14ನೆ ವರ್ಷದಿಂದ ಮನೆಯಲ್ಲಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. 5ನೇ ಪ್ರತಿವಾದಿ ನಿಮ್ಮ ತಂದೆಯ ಹೆಂಡತಿ ಮತ್ತು 3 ಮತ್ತು 4ನೇ ಪ್ರತಿವಾದಿಯರು ಅವರ ಮಕ್ಕಳು ಇರುತ್ತಾರೆ ಎಂದು ಶಾಲಾ ದಾಖಲಾತಿಯಲ್ಲಿ ಬಂದಿರುತ್ತದೆ ಎಂದರೆ ಸರಿ. ನೀವು ಮೊದಲಿನಿಂದಲೂ ನಿಮ್ಮ ತಂದೆಯ ನ್ನು ನೋಡಿಕೊಳ್ಳುತ್ತಿರಲಿಲ್ಲ ಮತ್ತು ಅವರನ್ನು ವಿಚಾರ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ.

2. ಗಾಣಾಧಾಳ ಪಂಚಾಯಿತಿಯಲ್ಲಿ ಖುಲ್ಲಾ ಜಾಗದ ಆಸ್ತಿ ನಂಬರ್ 532, ನಿಮ್ಮ ತಾಯಿ ಪಾರ್ವತೆಮ್ಮ ಇವರ ಹೆಸರಿನಲ್ಲಿದೆ ಎಂದರೆ ಸರಿ. ನೀವು ನಿಮ್ಮ ತಂದೆಯ ಭಾಗವನ್ನು ಒಬ್ಬರೆ ಪಡೆಯಬೇಕೆಂಬ ಉದ್ದೇಶದಿಂದ ನಿಮ್ಮ ತಾಯಿ ಮತ್ತು ಈ 5 ನೇ ಪ್ರತಿವಾದಿ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡದೇ ದಾವಾ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿ 3 ರಿಂದ 5 ರವರಿಗೂ ದಾವಾ ಆಸ್ತಿಗಳಲ್ಲಿ ಸಮ ಭಾಗದ ಹಕ್ಕು ಇದೆ ಎಂದರೆ ಸರಿಯಲ್ಲ. ಪ್ರತಿವಾದಿ ನಂಬರ್ 5 ರವರು 1ನೇ ಪ್ರತಿವಾದಿಯ ಕಾನೂನುಬದ್ದವಾಗಿ ಪತ್ನಿಯಾಗಿರುತ್ತಾರೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

**ನೋಟ್:-** ಉಳಿದ ಪಾಟೀಸವಾಲನ್ನು ಮತ್ತು 2ನೇ ಪ್ರತಿವಾದಿ ಪರವ ವಕೀಲರು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು ಅನುಮತಿಸಲಾಯಿತು.

**ವಾಟೀಸವಾಲು:** ಪ್ರತಿವಾದಿ ನಂಬರ್ 6 ಮತ್ತು 7 ಪರ ವಕೀಲರು ಗೈರು ಹಾಜರು ಇದ್ದು ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ